C.C. No.-3256/2021
CW-5/ PW-3

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ**

**ಸಾಕ್ಷಿಯನ್ನು ದಿನಾಂಕ-22-04.2026 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು- | ರೋಹಿತ್ |
| ತಂದೆ ಹೆಸರು- | ಶೇಖರಪ್ಪ |
| ವಯಸ್ಸು- | 30 ವರ್ಷಗಳು |
| ಉದ್ಯೋಗ- | ಪೆಂಟರ್ |
| ವಾಸಸ್ಥಳ- | ಕನಕಗಿರಿ |

**ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-**

1. ನನಗೆ ಚಾಸಾ-4 ಗೊತ್ತು. ಆರೋಪಿ ಗೊತ್ತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕಃ 26-06-2021 ರಂದು ನಾನು ಹಾಗೂ ಚಾಸಾ-4 ಕನಕಗಿರಿಯ ವಾಲ್ಮೀಕಿ ಸರ್ಕಲ್ ಬಳಿ ನಿಂತುಕೊಂಡಾಗ ಪೋಲಿಸರು ಬಂದು ನಮ್ಮನ್ನು ಒಬ್ಬ ಆರೋಪಿ ಸಿಕ್ಕಿರುತ್ತಾನೆ. ಆದಕಾರಣ ನೀವು ಜಪ್ತಿ ಪಂಚನಾಮೆಗೆ ಪಂಚರಾಗಲು ಬರಬೇಕು ಎಂದು ನೋಟಿಸನ್ನು ನೀಡಿ ನಮ್ಮ ಸಹಿಯನ್ನು ಪಡೆದರು. ನಂತರ ಅಲ್ಲಿಂದ ನಾವು ಠಾಣೆಗೆ ಹೋಗಿದ್ದು, ಆ ಸಮಯದಲ್ಲಿ ನಾನು, ಚಾಸಾ-4, ಪೋಲಿಸರು ಹಾಗೂ ಆರೋಪಿಯು ಇದ್ದೇವು. ನಂತರ ಪೋಲಿಸರು ನಮ್ಮನ್ನು ಬೂದುಗುಂಪಾ ಗ್ರಾಮದ ಆರೋಪಿಯ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಆರೋಪಿಯು 6.5 ರಿಂದ 7 ತೊಲೆ ಬಂಗಾರವನ್ನು ಹಾಗೂ 3 ರಿಂದ 4 ತೊಲೆ ಬೆಳ್ಳಿಯ ಆಭರಣಗಳನ್ನು ತಂದು ಪೋಲಿಸರಿಗೆ ನೀಡಿದ. ನಂತರ ಪೋಲಿಸರು ಅದನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ

ವಶಪಡಿಸಿಕೊಂಡು ಆ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಜಪ್ತಿ ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು ಸಾಕ್ಷಿಯು ಜಪ್ತಿ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಡಿಸಿಕೊಂಡು ಬೆಳ್ಳಿ ಮತ್ತು ಬಂಗಾರ ಇರುವ ಭಾವಚಿತ್ರವನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಬಿ.ಎ ರವರಿಂದಃ</u>

2. ಈ ಪ್ರಕರಣದಲ್ಲಿ ಯಾರು ದೂರು ನೀಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಚಾಸಾ-4 ನನಗೆ ಚಿಕ್ಕವನಿದ್ದಾಗಿನಿಂದಲೂ ನನಗೆ ಪರಿಚಯ. ಆರೋಪಿಯ ಬಗ್ಗೆ ಹಾಗೂ ಆತನ ಊರಿನ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಪೋಲಿಸರು ಚಾಸಾ-4 ರವರ ಮುಖಾಂತರ ನನಗೆ ಪರಿಚಯ. ಪೋಲಿಸರು ನನಗೆ ನೀಡಿದ ನೋಟಿಸನ್ನು ನಾನು ಓದಿರುವುದಿಲ್ಲ. ಸಾಕ್ಷಿಗೆ ಪೋಲಿಸರು ನೀಡಿದ ನೋಟಿಸನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಇದೆಯೇ ಎಂದರೆ ಸಾಕ್ಷಿಯು ಅದು ನನ್ನ ಸಹಿ ಅಲ್ಲವೆಂದು ನೀಡಿರುತ್ತಾರೆ. **ಸದರಿ ನೋಟಿಸನ್ನು ನಿಡಿ-1 ಎಂದು ಗುರುತಿಸಲಾಯಿತು.** ಆರೋಪಿ ಸಿಕ್ಕಬಗ್ಗೆ ನನಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿ. ನಾನು ಠಾಣೆಗೆ ಹೋದಾಗ ನನ್ನ ಹಾಗೂ ಪೋಲಿಸರ ನಡುವೆ ಯಾವುದೇ ಮಾತುಕತೆ ಆಗಿರುವುದಿಲ್ಲ. ಆ ಸಮಯದಲ್ಲಿ ಪೋಲಿಸರು ನನ್ನ

ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ನಿಪಿ-7(ಎ) ನ್ನು ತೋರಿಸಲಾಗಿ ಅದನ್ನು ಠಾಣೆಯಲ್ಲಿ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆ ಹೇಳಿ ಬರೆಸಿರುವುದಿಲ್ಲ. ನನಗೆ ಬೂದುಗುಂಪಾ ಗ್ರಾಮದ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ.

3. ಆರೋಪಿಯ ಮನೆಯಲ್ಲಿ ಎಷ್ಟು ಭಾಗಗಳಿವೆ ಮತ್ತು ಅದರ ಚೆಕ್ಕಬಂದಿಯ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ. ಆ ಮನೆಯಲ್ಲಿ ಯಾರು ಯಾರು ವಾಸ ಮಾಡುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಆ ಸಮಯದಲ್ಲಿ ನಾನು ಯಾವುದೇ ದಾಖಲೆಯನ್ನು ಹೇಳಿ ಬರೆಸಿರುವುದಿಲ್ಲ. ಆರೋಪಿ ಪೋಲಿಸರಿಗೆ ನೀಡಿದ 6-7 ತೊಲೆ ಬಂಗಾರ ಮತ್ತು 3-5 ತೊಲೆ ಬೆಳ್ಳಿಯನ್ನು ನಾನು ಕೈಯಲ್ಲಿ ಹಿಡಿದುಕೊಂಡು ನೋಡಿರುವುದಿಲ್ಲ. ಆರೋಪಿಯ ಮನೆಯ ಗ್ರಾಮ ಪಂಚಾಯತನ ನಂಬರ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಗೆ ನಿಪಿ-9 ನ್ನು ತೋರಿಸಲಾಗಿ ಅದರಲ್ಲಿ ಏನೇನು ಬಂಗಾರ ಮತ್ತು ಬೆಳ್ಳಿ ಇದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿಯು ಮೊದಲು ಅಲ್ಲಿ ಇದೆ ಎಂದು ಕೈಮಾಡಿ ತೋರಿಸಿ ನಂತರ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-9 ನ್ನು ನೋಡಿ ಯಾವ ಯಾವ ವಸ್ತುಗಳು ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-5 ಮತ್ತು 6 ಭಾವಚಿತ್ರಗಳನ್ನು ತೋರಿಸಿ ಸದರಿ ಭಾವಚಿತ್ರಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ನ್ನು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರವನ್ನು

ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-8 ನ್ನು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸಾಕ್ಷಿಯು ಎಂದರೆ ಸರಿಯಲ್ಲ. ಸದರಿ ಭಾವಚಿತ್ರವನ್ನು ಯಾರು ತೆಗೆದರು ಎಂದು ನನಗೆ ನೆನಪಿಲ್ಲ. ಸಾಕ್ಷಿಗೆ ನಿಪಿ-9 ನ್ನು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ನೀನು ಎಲ್ಲಿ ನೋಡುತ್ತಿದ್ದೀಯಾ ಫೋಟೋ ಭಾವಚಿತ್ರವನ್ನು ತೆಗೆಯುವ ಕಡೆ ನೋಡುತ್ತಿದ್ದೆ ಎಂದು ನುಡಿಯುತ್ತಾರೆ. ಭಾವಚಿತ್ರ ತೆಗೆದ ಸ್ಥಳದ ಬಗ್ಗೆ ನಿನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರೊಂದಿಗೆ ಬೂದುಗುಂಪಾದ ಆರೋಪಿಯ ಮನೆಗೆ ಹೋಗಿಲ್ಲ ಹಾಗೂ ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿಲ್ಲ, ಹಾಗೂ ನಿಪಿ-8 ಮತ್ತು 9 ರಂತೆ ಭಾವಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಆರೋಪಿಯ ಮನೆಯಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಆಗಾಗ ಪೋಲಿಸ್ ಠಾಣೆಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ಚಾಸಾ-4 ಆಗಾಗ ಪೋಲಿಸ್ ಠಾಣೆಗೆ ಹೋಗುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

4. ಆರೋಪಿಯು ಪೋಲಿಸರಿಗೆ ಯಾವುದೇ ಅಭರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಹಾಗೂ ಚಾಸಾ-4 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

C.C. No.-3256/2021
CW-5/ PW-3

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.